# ಸೇವೆಯ ಪರಿಕಲ್ಪನೆ

## ಸಾಧಕ ನಿರ್ದಯಿಯಲ್ಲ

ಎಲ್ಲ ಪ್ರಮುಖ ಧರ್ಮಗಳೂ ಪಾರಲೌಕಿಕಕ್ಕೆ ಪ್ರಾಧಾನ್ಯ ನೀಡುತ್ತವೆ. ಆಧ್ಯಾತ್ಮಿಕ ಸಾಧಕರು ಸ್ವರ್ಗ, ಮುಕ್ತಿಗಳನ್ನು ಗಳಿಸಲು, ಧ್ಯಾನ, ಪ್ರಾರ್ಥನೆಗಳಿಂದ ಪರಿಶುದ್ಧರಾಗಿ ದೇವರನ್ನು ಮೆಚ್ಚಿಸಲು ಬಯಸುತ್ತಾರೆ. ತಮ್ಮ ತಮ್ಮ ಧಾರ್ಮಿಕ ನಂಬಿಕೆಗಳಿಗನುಸಾರ ಬಾಹ್ಯ ಜಗತ್ತಿನ ವ್ಯವಹಾರಗಳಿಂದ ಮನಸ್ಸನ್ನು ಬಿಡಿಸಿಕೊಂಡು ಅದನ್ನು ದಾನ ಧರ್ಮಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆಧ್ಯಾತ್ಮಿಕತೆ ಎಂದರೆ ಕಣ್ಣುಗಳನ್ನು ಮುಚ್ಚಿಕೊಂಡು ಸುಮ್ಮನಿರುವುದು, ಮುಕ್ತಿಗಾಗಿ ಹೆಣಗುವುದೆಂದು ಭಾವಿಸುತ್ತಾರೆ. ಭಕ್ತಿಯನ್ನು ಆಶ್ರಯಿಸಿರುವವರು ದೇವರಲ್ಲಿ ಮನಸ್ಸನ್ನು ಇಡಲು ಪ್ರಯತ್ನಿಸಿದರೆ, ಜ್ಞಾನವನ್ನು ಆಶ್ರಯಿಸುವವರು ತಮ್ಮಲ್ಲಿಯೇ ಇರುವ ಆತ್ಮ ಚೈತನ್ಯದಲ್ಲಿ ಮನಸ್ಸನ್ನು ಒಂದಾಗಿಸಲು ಪ್ರಯತ್ನಿಸುವರು. ಸಾಮಾನ್ಯವಾಗಿ ಇವರೆಲ್ಲರೂ ಇತರರೊಡಗಿನ ಸಂಬಂಧಗಳನ್ನು, ಸೇವಾಕಾರ್ಯಗಳಲ್ಲಿ ತೊಡಗುವುದನ್ನೂ ಆಧ್ಯಾತ್ಮಿಕ ಸಾಧನೆಗೆ ಬಾಧಕಗಳೆಂದೇ ಭಾವಿಸುತ್ತಾರೆ. ಚಟುವಟಿಕೆ ಎಂಬುದು ಭಕ್ತಿಗೆ, ಧ್ಯಾನಕ್ಕೆ ವಿರುದ್ಧವಾದ ಕ್ರಿಯೆಯೆಂದೇ ಭಾವಿಸಿಕೊಂಡು ತಮ್ಮ ವೈಯಕ್ತಿಕ ಮುಕ್ತಿಯನ್ನು ಪಡೆಯಲು ಹಾತೊರೆಯುವ ಇಂತಹವರನ್ನು ಕಂಡು ಸ್ವಾಮಿ ವಿವೇಕಾನಂದರು ವೇದಾಂತದ ಒಂದು ಹೊಸ ಆಯಾಮವನ್ನು ಪ್ರಸಿದ್ಧಗೊಳಿಸಿದರು.

> ದಯೆಯಿಂದ ಪ್ರೇರಿತರಾಗಿ ಮತ್ತೊಬ್ಬರಿಗೆ ಹಿತವನ್ನು ಮಾಡುವುದು ಒಳ್ಳೆಯದು. ಆದರೆ ದೇವರೇ ಎಲ್ಲವೂ ಆಗಿರುವನೆಂದು ತಿಳಿದು ಸೇವೆ ಮಾಡುವುದು ಅತ್ಯುತ್ತಮ.
>
> —ಸ್ವಾಮಿ ವಿವೇಕಾನಂದ

**ಮಾ ಕಶ್ಚಿತ್ ದುಃಖಭಾಕ್ ಭವೇತ್**—ಯಾರೇ ಆಗಲಿ, ದುಃಖವನ್ನು ಅನುಭವಿಸದೇ ಇರಲಿ ಎಂಬ ವೈದಿಕ ಪ್ರಾರ್ಥನೆಯಾಗಲಿ ಅಥವಾ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುವ **ಸರ್ವಭೂತಹಿತೇ ರತಾಃ**—ಸರ್ವಭೂತಹಿತದಲ್ಲಿ ನಿರತರಾಗಿರುವುದು ಎಂಬ ವಿಚಾರಗಳಾಗಲಿ ಅನುಷ್ಠಾನಕ್ಕೆ ಬರಬೇಕಾದರೆ ಅದು ವ್ಯಕ್ತಿಯು ಆಧ್ಯಾತ್ಮಿಕವಾಗಿ ಪರಿಪೂರ್ಣನಾದ ಮೇಲೆ ಮಾತ್ರ ಸಾಧ್ಯ ಎಂಬ ಧೋರಣೆಯನ್ನು ಬದಿಗಿರಿಸಿ ಸೇವಾಕಾರ್ಯಗಳನ್ನೇ ಸಾಧನೆಯಾಗಿ ಮಾಡಿದವರು ಸ್ವಾಮಿಜಿ.

"ದಯವಿಲ್ಲದ ಧರ್ಮವದೇವುದಯ್ಯಾ, ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ" ಎಂಬ ಬಸವಣ್ಣವನರ ವಚನದಂತೆ ಎಲ್ಲ ಧರ್ಮಗಳಲ್ಲೂ ಕೂಡ ದಯೆಯ ಕುರಿತಾದ ಅದ್ಭುತ ನುಡಿಗಳು ಕಂಡುಬರುತ್ತವೆ. "ಭಗವಂತನನ್ನು, ನಿನ್ನ ದೇವರನ್ನು, ನಿನ್ನ ಪೂರ್ಣ ಹೃದಯದಿಂದ, ನಿನ್ನ ಅಂತರಾಳದಿಂದ, ನಿನ್ನೆಲ್ಲ ಸಾಮರ್ಥ್ಯದಿಂದ ಪ್ರೀತಿಸು" ಎನ್ನುವ ಏಸುಕ್ರಿಸ್ತನೇ ಮತ್ತೊಮ್ಮೆ ಹೇಳುತ್ತಾನೆ, "ನಿನ್ನ ಅಕ್ಕಪಕ್ಕದವರನ್ನು ನಿನ್ನಂತೆ ಪ್ರೀತಿಸು." ದಾನಕ್ರಿಯೆಗಳಲ್ಲಿ ಕಡ್ಡಾಯವಾಗಿ ತೊಡಗಿಸಿಕೊಳ್ಳಬೇಕೆಂದು ಇಸ್ಲಾಂ ಧರ್ಮವೂ ವಿಧಿಸುತ್ತದೆ. ಒಂದು ಹಕ್ಕಿಯ ಜೀವವನ್ನು ಉಳಿಸಲೋಸುಗ ತನ್ನನ್ನೇ ಅರ್ಪಿಸಿಕೊಂಡ ಬೋಧಿಸತ್ವನ ಉಪದೇಶಗಳಲ್ಲಿ ಕರುಣೆ ಹಾಗೂ ದಯೆಗೆ ಎಲ್ಲಿಲ್ಲದ ಪ್ರಾಶಸ್ತ್ಯವಿದೆ. ಅಂತೆಯೇ ಜೈನ ಹಾಗೂ ಸಿಖ್ಖರ ಧರ್ಮಗಳಲ್ಲೂ ದಯೆಗೆ ಬಹಳ ಒತ್ತು ನೀಡಲಾಗಿದೆ.

## ದಯೆಯಲ್ಲ, ಸೇವೆ

ಸ್ವಾಮಿ ವಿವೇಕಾನಂದರು ದಯೆಗಿಂತ ಸೇವೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದರು. ಇದಕ್ಕೆ ಕಾರಣವಿದೆ. ದಯೆ ಹಾಗೂ ಸೇವೆಗಳು ಪರ್ಯಾಯ ಪದಗಳೆಂದು ನಾವು ಭಾವಿಸುತ್ತೇವೆ. ಆದರೆ ಇವುಗಳ ನಡುವಿನ ಅಂತರವನ್ನು ಶ್ರೀರಾಮಕೃಷ್ಣರಿಂದ ವಿವೇಕಾನಂದರು ಕಲಿತರು. ೧೮೮೪ರಲ್ಲಿ ನಡೆದ ಒಂದು ಘಟನೆಯಿದು. ಶ್ರೀರಾಮಕೃಷ್ಣ ಪರಮಹಂಸರು ವೈಷ್ಣವಧರ್ಮದ ಮೂಲ ತತ್ತ್ವಗಳನ್ನು ಭಕ್ತರಿಗೆ ವಿವರಿಸುತ್ತಿದ್ದರು. ಅವರ ಕೋಣೆಯಲ್ಲಿ ಕುಳಿತಿದ್ದ ಭಕ್ತರಲ್ಲಿ ನರೇಂದ್ರನೂ (ಸ್ವಾಮಿ ವಿವೇಕಾನಂದ) ಇದ್ದ. ಶ್ರೀರಾಮಕೃಷ್ಣರು ವಿವರಿಸುತ್ತಿದ್ದರು: "ವೈಷ್ಣವ ಧರ್ಮದಲ್ಲಿ ಮೂರು ನಿಯಮಗಳನ್ನು ಯಾವಾಗಲೂ ಪಾಲಿಸಬೇಕೆಂದು ಹೇಳಿದೆ—ನಾಮದಲ್ಲಿ ರುಚಿ ಕಾಣುವುದು, ಜೀವಿಗಳಿಗೆ ದಯೆ ತೋರಿಸುವುದು ಮತ್ತು ವೈಷ್ಣವರನ್ನು ಪೂಜಿಸುವುದು. ಯಾವುದು ನಾಮವೋ ಅವನೇ ಭಗವಂತ. ನಾಮ-ನಾಮಿ ಅಭೇದವೆಂದು ತಿಳಿದು ಯಾವಾಗಲೂ ಪ್ರೀತಿಯಿಂದ ನಾಮ ಜಪ ಮಾಡಬೇಕು. ಭಕ್ತ ಮತ್ತು ಭಗವಂತ, ಕೃಷ್ಣ ಮತ್ತು ವೈಷ್ಣವ ಅಭೇದವೆಂದು ತಿಳಿದು ಯಾವಾಗಲೂ ಸಾಧುಭಕ್ತರಿಗೆ ಶ್ರದ್ಧೆಯಿಂದ ವಂದಿಸಬೇಕು. ಈ ಜಗತ್ತು ಕೃಷ್ಣನದು ಎಂದು ಹೃತ್ಪೂರ್ವಕವಾಗಿ ಭಾವಿಸುತ್ತ ಸರ್ವಜೀವಿಗಳ ಮೇಲೂ ದಯೆ ತೋರಿಸಬೇಕು" (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೨, ಪು.೩೭೯). "ಸರ್ವ ಜೀವಿಗಳ ಮೇಲೆ ದಯೆ" ಇಷ್ಟನ್ನು ಹೇಳಿಯೆ ಅವರು ಇದ್ದಕ್ಕಿದ್ದಂತೆಯೇ ಸಮಾಧಿಸ್ಥರಾಗಿಬಿಟ್ಟರು. ಸ್ವಲ್ಪ ಹೊತ್ತಿನ ನಂತರ ಅರ್ಧಬಾಹ್ಯದಶೆಗೆ ಬಂದು

ಹೇಳತೊಡಗಿದರು: 'ಜೀವಿಗಳ ಮೇಲೆ ದಯೆ ತೋರಿಸುವುದೆ? ಜೀವಿಗಳ ಮೇಲೆ ದಯೆ ತೋರಿಸುವೆಯಾ? ದಯೆ ತೋರಿಸುವುದಕ್ಕೆ ನೀನಾರು? ಇಲ್ಲ, ಇಲ್ಲ, ಜೀವಿಗಳ ಮೇಲೆ ದಯೆ ಅಲ್ಲ—ಶಿವಜ್ಞಾನದಲ್ಲಿ ಜೀವಿಗಳ ಸೇವೆ!" (ಅದೇ)

ಅಲ್ಲಿ ನೆರೆದಿದ್ದ ಭಕ್ತರೆಲ್ಲರೂ ಈ ಮಾತುಗಳನ್ನು ಕೇಳಿಸಿಕೊಂಡಿದ್ದರೂ ನರೇಂದ್ರನಿಗೆ ಮಾತ್ರ ಇದರ ಗೂಢಾರ್ಥ ಹೊಳೆಯಿತು. ಮುಂದೆ ಈ ಒಂದು ನುಡಿಯನ್ನು ಆಧರಿಸಿ ರಾಮಕೃಷ್ಣ ಮಿಷನ್ ಸಂಸ್ಥೆಯನ್ನು ಸ್ವಾಮಿ ವಿವೇಕಾನಂದರು ಸ್ಥಾಪಿಸಿದರು. ಎಲ್ಲೆಡೆ ಇದರ ವ್ಯಾಖ್ಯಾನವನ್ನು ಮಾಡಿ 'ಅನುಷ್ಠಾನ ವೇದಾಂತ'ಕ್ಕೆ ಚಾಲನೆ ನೀಡಿದರು. ಶ್ರೀರಾಮಕೃಷ್ಣರು ದಯೆ ತೋರುವುದನ್ನು ಬೇಡವೆನ್ನಲಿಲ್ಲ. ಅದನ್ನು ಆಧ್ಯಾತ್ಮಿಕ ಸಾಧನೆಯನ್ನಾಗಿ ಪರಿವರ್ತಿಸಿದರು. ಸ್ವಾಮಿ ವಿವೇಕಾನಂದರು ಈ ಕುರಿತು ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ:

## ಆತ್ಮಪ್ರತಿಷ್ಠೆಯಲ್ಲ, ಆತ್ಮತ್ಯಾಗ, ಪ್ರಪಂಚದ ಶ್ರೇಷ್ಠತಮ ಧರ್ಮ...

—ಸ್ವಾಮಿ ವಿವೇಕಾನಂದ

೧. 'ನಾನು ದಾನಿ', 'ನಾನು ನೀಡುತ್ತಿರುವೆನು', 'ನನ್ನಿಂದ ಸಹಾಯವಾಗುತ್ತಿದೆ', 'ಸಹಾಯ ಪಡೆಯವವನು ನನಗೆ ಕೃತಜ್ಞನಾಗಿರಬೇಕು' ಎಂಬ ಅಹಂಕಾರವು ದಾನ ಮಾಡುವರಲ್ಲಿ ತಲೆದೋರುತ್ತದೆ. ಇದನ್ನು ಹೋಗಲಾಡಿಸಲು ಆಧ್ಯಾತ್ಮಿಕ ದೃಷ್ಟಿಯೊಂದೇ ಮಾರ್ಗ. ನಿಜವಾದ ವಿನಯವುಂಟಾಗಲು 'ನಾನು' ಮತ್ತು 'ನನ್ನದು'ಗಳಿಂದ ಮುಕ್ತನಾಗಿರಬೇಕು. ಎಲ್ಲ ಜೀವಿಗಳಲ್ಲೂ ಇರುವ ದೈವಾಂಶವನ್ನು ಕಾಣುವ ದೃಷ್ಟಿಯಿರಬೇಕು. ಸ್ವಾಮಿ ವಿವೇಕಾನಂದರೆನ್ನುವಂತೆ "ಪ್ರಪಂಚದಲ್ಲಿರುವ ಎಲ್ಲಾ ವ್ಯಕ್ತಿಗಳನ್ನೂ ಈ ರೀತಿ ಶಿವಜ್ಞಾನದಿಂದ ನೋಡಲು ಸಾಧ್ಯವಾದರೆ ತನ್ನನ್ನು ಒಬ್ಬ ದೊಡ್ಡ ವ್ಯಕ್ತಿಯೆಂದು ಪರಿಗಣಿಸುತ್ತಾ ಇತರರ ವಿಷಯದಲ್ಲಿ ರಾಗ, ದ್ವೇಷ, ಜಂಭ ಅಥವಾ ದಯೆ—ಇವುಗಳನ್ನು ವ್ಯಕ್ತಪಡಿಸಲು ಅವಕಾಶವೆಲ್ಲಿ? ಈ ರೀತಿ ಶಿವಜ್ಞಾನದಿಂದ ಜೀವಿಗಳ ಸೇವೆ ಮಾಡುತ್ತಾ ಚಿತ್ತ ಶುದ್ಧಿ ಉಂಟಾಗುತ್ತದೆ. ಸ್ವಲ್ಪಕಾಲದಲ್ಲಿಯೇ ತನ್ನನ್ನು ಚಿದಾನಂದಮಯ ಭಗವಂತನ ಅಂಶ—ಶುದ್ಧ, ಬುದ್ಧ, ಮುಕ್ತ ಸ್ವಭಾವದವನು ಎಂದು ಅರಿಯಲು ಸಾಧ್ಯವಾಗುತ್ತದೆ."

೨. ಶ್ರೀರಾಮಕೃಷ್ಣರ ನುಡಿಗಳು ಭಕ್ತಿ ಹಾಗೂ ಜ್ಞಾನಗಳ ನಡುವಣ ಅಂತರವನ್ನು ತೆಗೆದುಹಾಕಿವೆ. ಅಷ್ಟೇ ಅಲ್ಲ, ಭಕ್ತಿ ಹಾಗೂ ಜ್ಞಾನಗಳ ಗುರಿಯೂ ಒಂದೇ ಎಂಬುದನ್ನು ತೋರಿಸುತ್ತವೆ. ಶ್ರೀರಾಮಕೃಷ್ಣರ ಮಾತುಗಳನ್ನು ವ್ಯಾಖ್ಯಾನಿಸುತ್ತಾ ಸ್ವಾಮಿ ವಿವೇಕಾನಂದರು "ಇಂದು ಶ್ರೀರಾಮಕೃಷ್ಣರ ಮಾತಿನಲ್ಲಿ ಎಂಥ ಅದ್ಭುತ ಬೆಳಕನ್ನು ಕಂಡೆ! ಶುಷ್ಕ ಕಠೋರ, ನಿಷ್ಪ್ರೇಮವೆಂದು ಪ್ರಸಿದ್ಧವಾಗಿರುವ ವೇದಾಂತ ಜ್ಞಾನವನ್ನು ಭಕ್ತಿಯೊಡನೆ ಒಂದುಗೂಡಿಸಿ ಎಂಥ ಸರಳವೂ ಮಧುರವೂ ಆದ ವ್ಯಾಖ್ಯಾನವನ್ನು ನೀಡಿದರು! ಅದ್ವೈತ ಜ್ಞಾನವನ್ನು ಪಡೆದರೆ ಸಂಸಾರ ಮತ್ತು ಪ್ರಪಂಚದ ಸಂಗವನ್ನು ತ್ಯಜಿಸಿ ಕಾಡಿಗೆ ಹೋಗಬೇಕು ಮತ್ತು ಭಕ್ತಿ, ಪ್ರೀತಿ ಮುಂತಾದ ಕೋಮಲ ಭಾವನೆಗಳನ್ನು ಹೃದಯದಿಂದ ಸಂಪೂರ್ಣ ಕಿತ್ತೆಸೆಯಬೇಕು—ಈ ಮಾತನ್ನು ಇಷ್ಟು ಕಾಲವೂ ಕೇಳುತ್ತಾ ಬಂದಿದ್ದೇನೆ. ಇದರ ಪರಿಣಾಮವಾಗಿ ಜಗತ್ತು ಮತ್ತು ಅದರಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಧರ್ಮಮಾರ್ಗಕ್ಕಿರುವ ಅಡಚಣೆಗಳೆಂದು ಪರಿಗಣಿಸಿ, ತಿರಸ್ಕಾರ ಭಾವನೆ ಉಂಟಾಗಿ, ಸಾಧಕನಿಗದು ಹಾನಿಯನ್ನುಂಟುಮಾಡುತ್ತದೆ. ಶ್ರೀರಾಮಕೃಷ್ಣರ ಈ ಮಾತಿನಿಂದ ಭಕ್ತಿಮಾರ್ಗದಲ್ಲಿಯೂ ವಿಶೇಷ ಬೆಳಕನ್ನು ಕಂಡಂತಾಯಿತು. ಸಾಧಕನು ಸರ್ವಭೂತಗಳಲ್ಲಿಯೂ ಭಗವಂತನನ್ನು ಎಲ್ಲಿಯವರೆಗೆ ಕಾಣಲಾಗುವುದಿಲ್ಲವೋ ಅಲ್ಲಿಯವರೆಗೆ ಯಥಾರ್ಥಭಕ್ತಿ ಅಥವಾ ಪರಾಭಕ್ತಿಯನ್ನು ಪಡೆಯುವುದು ಬಹು ದೂರದ ಮಾತು. ಶಿವ ಅಥವಾ ನಾರಾಯಣ ಭಾವದಿಂದ ಜೀವಿಗಳ ಸೇವೆ ಮಾಡಿದರೆ ಎಲ್ಲರ ಒಳಗೂ ಭಗವಂತನನ್ನು ಕಾಣುವುದರ ಮೂಲಕ ಸಾಧಕನು ಯಥಾರ್ಥ ಭಕ್ತಿಯನ್ನು ಪಡೆದು ಸ್ವಲ್ಪ ಕಾಲದಲ್ಲಿಯೇ ಕೃತಾರ್ಥನಾಗುತ್ತಾನೆ."

೩. ಶ್ರೀರಾಮಕೃಷ್ಣರ ಈ ನುಡಿ ಕಾಡಿನ ವೇದಾಂತವನ್ನು ನಾಡಿಗೆ ಕರೆತಂದಿದೆ. ಪ್ರತಿದಿನದ ಕಾರ್ಯಗಳನ್ನೂ ವೇದಾಂತದ ದೃಷ್ಟಿಯಿಂದ ಮಾಡುವಂತಹ ಹೊಸ ದೃಷ್ಟಿಯನ್ನು ನೀಡುತ್ತದೆ. "ಮಾನವನು ಏನೇನು ಮಾಡುತ್ತಿರುವನೋ ಅದನ್ನೇ ಮಾಡಲಿ, ಅದರಲ್ಲಿ ಹಾನಿಯಿಲ್ಲ. ಆದರೆ ಅವನು ತನ್ನ ಹೃದಯಾಂತರಾಳದಲ್ಲಿ ಈ ವಿಶ್ವಾಸವನ್ನು ಇಟ್ಟುಕೊಂಡಿರಬೇಕು: ಈಶ್ವರನೇ ಜೀವ ಜಗತ್ತಿನ ರೂಪದಲ್ಲಿ ನನ್ನ ಮುಂದೆ ಪ್ರಕಾಶಿಸುತ್ತಿರುವನು, ಜೀವನದ ಪ್ರತಿ ಮುಹೂರ್ತದಲ್ಲಿಯೂ ನಾನು ಯಾರನ್ನು ಸಂಪರ್ಕಿಸುವೆನೋ, ಯಾರನ್ನು ಪ್ರೀತಿಸುವೆನೋ, ಯಾರಿಗೆ ಶ್ರದ್ಧೆ, ದಯೆ, ಗೌರವ ತೋರಿಸುವೆನೋ ಅವರೆಲ್ಲರೂ ಭಗವಂತನ ಅಂಶ."

೪. ಸಾಧಕರು ಕೇವಲ ಜಪ, ಧ್ಯಾನಗಳಿಂದ ತಮ್ಮ ಮನಸ್ಸನ್ನು ನಿಯಂತ್ರಿಸಲು ಪ್ರಯತ್ನಿಸುವುದಕ್ಕಿಂತ ಸೇವೆಯ ಮೂಲಕ

**ಪೂರ್ಣತ್ಯಾಗವೇ ಪರಮಾದರ್ಶ. ಅಲ್ಲಿ ನಾನೆಂಬುವುದಿಲ್ಲ, ಎಲ್ಲಾ ನೀನು.** —ಸ್ವಾಮಿ ವಿವೇಕಾನಂದ

ಅದನ್ನು ಪಳಗಿಸಬೇಕೆಂದು ಸ್ವಾಮಿಜಿ ಹೇಳುತ್ತಿದ್ದರು. ಸ್ವಾಮಿಜಿ ಈ ಬೆಳಕನ್ನೂ ಕೂಡ ಶ್ರೀರಾಮಕೃಷ್ಣರ ನುಡಿಗಳಲ್ಲಿ ಕಂಡರು. 'ಕರ್ಮ ಅಥವಾ ರಾಜಯೋಗವನ್ನು ಯಾರು ಅನುಸರಿಸುತ್ತಿರುವರೋ ಆ ಸಾಧಕರೂ ಕೂಡ, ಈ ಮಾತಿನಲ್ಲಿ ವಿಶೇಷ ಬೆಳಕನ್ನು ಪಡೆಯುತ್ತಾರೆ. ಏಕೆಂದರೆ ದೇಹಧಾರಿಯಾದವನು ಕರ್ಮ ಮಾಡದೆ ಒಂದು ಕ್ಷಣವೂ ಇರಲಾರ. ಹಾಗಿರುವಾಗ ಶಿವಜ್ಞಾನದಲ್ಲಿ ಜೀವಸೇವೆಯ ರೂಪದ ಕರ್ಮಾನುಷ್ಠಾನ ಮಾಡುವುದು ಅವನ ಕರ್ತವ್ಯ ಮತ್ತು ಹೀಗೆ ಮಾಡುವುದರಿಂದ ಬೇಗ ತನ್ನ ಗುರಿಯನ್ನು ಮುಟ್ಟುತ್ತಾನೆ."

೫. ಈ ಮಾರ್ಗವನ್ನು ಅನುಸರಿಸುವುದರ ಮೂಲಕ ಸಾಧಕನ ಆಂತರಿಕ ಹಾಗೂ ಬಹಿರಂಗದ ಕ್ರಿಯೆಗಳೆಲ್ಲವೂ ಆಧ್ಯಾತ್ಮಿಕವಾಗಿ ಆತನು ಸಮತೋಲನದ ಸ್ಥಿತಿಯನ್ನು ಹೊಂದುವನು. ಸಾಧಕನಾದವನು ಆಂತರಿಕತೆಯನ್ನು ಸಾಧಿಸಲು ಪ್ರಯತ್ನಿಸುವಾಗ ತನ್ನತನ ಅಥವಾ ಸ್ವಾರ್ಥವನ್ನು ಗೆಲ್ಲಬೇಕಾಗುತ್ತದೆ. ಕೇವಲ ತನ್ನ ಮುಕ್ತಿಗಾಗಿ ಹೆಣಗುವ ಪ್ರವೃತ್ತಿಯಿಂದ ವ್ಯಕ್ತಿ ಸ್ವಾರ್ಥಿಯಾಗಬಲ್ಲ. ಹಾಗೆಯೇ 'ನಾನು ಎಲ್ಲರ ಸೇವೆ ಮಾಡುವೆ' ಎಂಬ ಭಾವನೆಗೂ ಆಧ್ಯಾತ್ಮಿಕವಾದ ಆಯಾಮವಿಲ್ಲದೆ ಹೋದರೆ ಅದು ಲೌಕಿಕವಾಗುವ ಸಾಧ್ಯತೆಯಿರುತ್ತದೆ. ಸೇವೆಯಿಂದ ಮನುಷ್ಯನ ವೈಯಕ್ತಿಕ ಹಾಗೂ ಸಾಮಾಜಿಕ ಜೀವನಗಳೆರಡೂ ಸಮೃದ್ಧವಾಗುತ್ತವೆ.

೬. 'ನಾನು ಪಾಪಿ', 'ನಾನೇನು ಮಾಡಬಲ್ಲೆ', 'ನಾನೇನು ದಯೆ ತೋರಬಲ್ಲೆ' ಎಂಬ ತೋರಿಕೆಯ ವಿನಯ ಹಾಗೂ ಕೀಳು ಮನೋಭಾವನೆಗಳನ್ನು ಈ ಉಪದೇಶದ ಆಧಾರದಿಂದ ಗೆಲ್ಲಬಹುದು. ಸೇವೆಯನ್ನು ಎಲ್ಲರೂ ಮಾಡಬಹುದು. ಕೇವಲ ದೇವಸ್ಥಾನಗಳಲ್ಲಿರುವ, ಮನೆಯ ದೇವರ ಕೋಣೆಯಲ್ಲಿರುವ ದೇವರ ಪೂಜೆಗಿಂತ ಎಲ್ಲ ಜೀವಿಗಳಲ್ಲಿಯೂ ಇರುವ ಭಗವಂತನ ಆರಾಧನೆಯನ್ನು ಮಾಡಬೇಕು. ಇದನ್ನು ಇಂತಹ ಅಧಿಕಾರಿಯೇ ಮಾಡಬೇಕು, ಅಂತಹ ಸಾಧಕನೇ ಮಾಡಬೇಕು ಎಂಬ ನಿಯಮವಿಲ್ಲ. ಇದನ್ನು ಮಾಡಲು ಪಾಂಡಿತ್ಯದ ಆವಶ್ಯಕತೆಯಿಲ್ಲ. ಭಾವನೆಗೆ ಸ್ಪಂದಿಸುವ ಹೃದಯಗಳು ಮಾತ್ರ ಇದ್ದರೆ ಸಾಕು.

ಅನುಕಂಪೆಗೂ, ಸಹಾನುಭೂತಿಗೂ ವ್ಯತ್ಯಾಸವಿದೆ. ಮತ್ತೊಬ್ಬರ ಕಷ್ಟನಷ್ಟಗಳನ್ನು ಕಂಡು ಅವು ತನಗೇ ಆದಂತೆ ಅನುಭವಿಸುವುದು ಸಹಾನುಭೂತಿ. ಇಂತಹ ವ್ಯಕ್ತಿಯು ಹಿತ ನುಡಿಗಳನ್ನು ಹೇಳುತ್ತ ಸಾಂತ್ವನ ನೀಡಲು ಪ್ರಯತ್ನಿಸುತ್ತಾನೆ, ಮರುಕವನ್ನು ವ್ಯಕ್ತಪಡಿಸುತ್ತಾನೆ. ಅನೇಕ ವೇಳೆ ನಷ್ಟಕ್ಕೊಳಗಾದವರೊಂದಿಗೆ ತಾದಾತ್ಮ್ಯವನ್ನು ಅನುಭವಿಸುತ್ತ ಅವರೊಂದಿಗೆ ದುಃಖಪಡುತ್ತಾನೆ. ತನಗೇ ಅದು ಬಂದೊದಗಿದೆ ಎನ್ನುವಂತೆ ವರ್ತಿಸುತ್ತಾನೆ. ಕೇವಲ ಅನುಕಂಪೆ ಇದ್ದರೆ ನಿಜವಾದ ಸೇವೆ ಸಲ್ಲುವುದಿಲ್ಲ. ಭಾವನಾತ್ಮಕವಾಗಿ ಸಾಂತ್ವನ ನೀಡಿದರೆ ಅದು ಕೆಲವು ಕ್ಷಣಗಳು ಮಾತ್ರ ಉಳಿಯುತ್ತದೆ. ಸಹಾನುಭೂತಿಯುಳ್ಳ ವ್ಯಕ್ತಿ ಕೇವಲ ಅನುಕಂಪೆಯನ್ನು ತೋರದೆ ಸಕ್ರಿಯವಾಗಿ ನೊಂದವರ ನೋವನ್ನು ನೀಗಿಸುವತ್ತ ಗಮನ ಹರಿಸುತ್ತಾನೆ. ಶುಶ್ರೂಷೆ, ಸೇವೆಗಳ ಮೂಲಕ ವ್ಯಕ್ತಿಗೆ ಭರವಸೆಯನ್ನು ನೀಡಿ ಅವನ ಮನಸ್ಸಿನ ದುಗುಡವನ್ನು ಹೋಗಲಾಡಿಸುತ್ತಾನೆ. ಸಹಾನುಭೂತಿಯು ಕ್ರಿಯಾತ್ಮಕವಾದದ್ದು, ಕೇವಲ ಭಾವನಾತ್ಮಕವಲ್ಲ. ಸಹಾನುಭೂತಿಯುಳ್ಳ ವ್ಯಕ್ತಿ ತನ್ನ ವ್ಯಕ್ತಿಗತ ವಿವೇಕವನ್ನು ಉಳಿಸಿಕೊಂಡು, ನಿರ್ಲಿಪ್ತನಾಗಿ ಸೇವೆ ಸಲ್ಲಿಸುತ್ತಾನೆ. ಇಂತಹ ಸೇವೆಯಿಂದ ವ್ಯಕ್ತಿಯು ಯಾವುದೇ ಬಂಧನ ಅಥವಾ ವ್ಯಾಮೋಹಕ್ಕೊಳಗಾಗುವುದಿಲ್ಲ.

**ಸೇವೆ ಮಾಡುವಾಗ ಎಚ್ಚರವಿರಲಿ**

ಸೇವೆ ಮಾಡುವ ವ್ಯಕ್ತಿಗಳನ್ನು ಕಾಡುವ ಪ್ರಮುಖ ಸಮಸ್ಯೆಯೆಂದರೆ ಮಾನಸಿಕ ದಣಿವು. ಇತರರ ತೊಂದರೆಗಳನ್ನು ಕಂಡು, ಕೇಳಿ, ಅದನ್ನು ಬಗೆಹರಿಸುವ ಪ್ರಯತ್ನದಲ್ಲಿ ಇವರೇ ದಣಿದು ಸುಸ್ತಾಗುತ್ತಾರೆ. ಹಾಗಾದಾಗ ಉದ್ವೇಗಗಳು, ಒತ್ತಡಗಳು ಪ್ರಾರಂಭವಾಗಿ ರೇಗುವುದು, ಅಸಡ್ಡೆ ಹಾಗೂ ನಿರಾಶಾ ಮನೋಭಾವಗಳು ಮೂಡಲಾರಂಭಿಸುತ್ತವೆ. ಸೇವೆಯನ್ನು ಆಧ್ಯಾತ್ಮಿಕ ಸಾಧನೆಯೆಂದು ಪರಿಗಣಿಸುತ್ತ, ಯಾರ ಜೀವನದೊಂದಿಗೂ ನೇರವಾಗಿ ಬೆರೆತುಹೋಗದೆ, ತನ್ನ ನಿಲುವನ್ನು ಕಾಪಾಡಿಕೊಳ್ಳುವುದು ಸೇವಾಕರ್ತನ ಕರ್ತವ್ಯ. ಸೇವೆ ಮಾಡುವುದು ಚಟವಾಗಿ ಪರಿಣಮಿಸದೆ, ಹೃದಯದ ಭಾವನೆಗಳಿಗೆ ಆಧ್ಯಾತ್ಮಿಕ ತಿರುವನ್ನು ನೀಡುವ ವಿಧಾನವಾಗಬೇಕು. ಸೇವೆಯನ್ನು ಮಾಡುವವನನ್ನೇ ಅದು ನುಂಗಿಹಾಕಿದರೆ ಆಗ ಇಂತಹ ಕೆಲಸಗಳಿಂದ ಏನು ತಾನೇ ಪ್ರಯೋಜನ? ನಿಜವಾದ ಸೇವೆಯಲ್ಲಿ ದಣಿವು, ಬೇಸರಗಳಿಗೆ ಆಸ್ಪದವಿರುವುದಿಲ್ಲ.

ತಮ್ಮ ತ್ಯಾಗ, ನಿರಭಿಮಾನವನ್ನು ಇತರರಿಗೆ ಪ್ರದರ್ಶಿಸುವ ಹಂಬಲವಿದ್ದರೆ ಆಗ ನಿಜವಾದ ಸೇವೆ ಸಲ್ಲುವುದಿಲ್ಲ. ಕೀರ್ತಿ, ಆರ್ಥಿಕ ಪ್ರಗತಿ ಇತ್ಯಾದಿಗಳ ಬಯಕೆಯಿಂದ ಸೇವೆ ಮಾಡುವವರನ್ನು ತಿರಸ್ಕಾರವೇ ಎದುರುಗೊಳ್ಳುತ್ತದೆ. 'ನಾನಿಲ್ಲದೆ

**ಕರ್ಮ ಮಾಡುವುದೇ ಧರ್ಮವಲ್ಲ. ಆದರೆ ಧಾರ್ಮಿಕವಾಗಿ ಕರ್ಮ ಮಾಡಿದರೆ ಅದು ಮುಕ್ತಿಗೊಯ್ಯುವುದು. ಸತ್ಯವಾಗಿ ನೋಡಿದರೆ, ಮರುಕವೆಂಬುದು ಅಜ್ಞಾನಜನ್ಯ. ನಾವು ಯಾರಿಗೆ ಮರುಗಬಲ್ಲೆವು? ನೀವು ದೇವರಿಗೆ ಮರುಗುವಿರಾ? ದೇವರಲ್ಲದೆ ಪ್ರಪಂಚದಲ್ಲಿ ಯಾವುದಾದರೂ ಇರುವುದೇ? ನಿಮ್ಮ ವಿಕಾಸಕ್ಕೆ ಪ್ರಪಂಚವೆಂಬ ಗರಡಿಯ ಮನೆಯನ್ನು ಕೊಟ್ಟಿರುವುದರಿಂದ ದೇವರಿಗೆ ಧನ್ಯವಾದವನ್ನು ಅರ್ಪಿಸಿ. ಆದರೆ ಪ್ರಪಂಚಕ್ಕೆ ಉಪಕಾರ ಮಾಡುವೆನು ಎಂದು ಎಂದಿಗೂ ಭ್ರಾಂತರಾಗಬೇಡಿ.** —ಸ್ವಾಮಿ ವಿವೇಕಾನಂದ

ನಡೆಯುವುದಿಲ್ಲ' 'ಇವರೆಲ್ಲ ನನ್ನನ್ನೇ ಅವಲಂಬಿಸಿರುವವರು' ಎಂಬ ಧೋರಣೆಯೂ ಕೂಡ ಕೆಲವೊಮ್ಮೆ ಸೇವಾಕರ್ತರಲ್ಲಿ ತಲೆದೋರುತ್ತದೆ. ಇದು ಅಹಂಕಾರದ ಮತ್ತೊಂದು ಮುಖವಷ್ಟೇ. ಯಾವುದೂ ಯಾರನ್ನೂ ಅವಲಂಬಿಸಿರುವುದಿಲ್ಲ ಎಂಬ ಸತ್ಯವನ್ನು ಸೇವಾಕರ್ತರು ಸದಾ ನೆನಪಿಸಿಕೊಳ್ಳಬೇಕು.

ಸೇವೆ ಪಡೆದವರು ಕೃತಜ್ಞರಾಗಿರಬೇಕು ಎಂದು ಬಯಸುವುದು ತಪ್ಪು. ಸೇವಾಕರ್ತರು ತಮ್ಮ ನಡವಳಿಕೆಯಿಂದ ಇಂತಹ ಬಯಕೆಯನ್ನು ವ್ಯಕ್ತಪಡಿಸುತ್ತಾರೆ. "ನಾವೆಷ್ಟು ಕಷ್ಟಪಟ್ಟು ನಿಮಗಾಗಿ ಈ ಪದಾರ್ಥಗಳನ್ನು ಸಂಗ್ರಹಿಸಿದ್ದೇವೆ. ನಿಮಗೆ ಇದರ ಬಗ್ಗೆ ಗೊತ್ತಿದೆಯೇ?" ಎಂದು ಭಾಷಣ ಬಿಗಿದು ತಮ್ಮ ಬಗ್ಗೆ ಬಲವಂತವಾಗಿ ಸಹಾಯ ಪಡೆದವರಲ್ಲಿ ಗೌರವ ಮೂಡಿಸುವ ಮಹತ್ಸಾಧನೆಯಲ್ಲಿ ತೊಡಗುತ್ತಾರೆ. ಏಸುಕ್ರಿಸ್ತನು ಹೇಳುವಂತೆ, 'ಬಲಗೈ ನೀಡುತ್ತಿದ್ದರೆ, ಅದು ಎಡಗೈಗೆ ತಿಳಿಯದೆ ಇರಲಿ" ಎಂಬ ಮನೋಭಾವನೆ ಇರಬೇಕು. 'ನಾನು ನಿಮಗಿಂತ ಉತ್ತಮ' ಎಂಬ ಅಹಂ, ನಮ್ಮ ಸುತ್ತ ಒಂದು ಪರಿಧಿಯನ್ನು ಕಟ್ಟಿಬಿಡುತ್ತದೆ. ಸೇವೆ ಮಾಡಲು ಅವಕಾಶ ದೊರೆಯಿತೆಂದು ನಾವು ಕೃತಜ್ಞರಾಗಿರಬೇಕೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನೀಡುವವನು ಬಾಗಿ ಸ್ವೀಕರಿಸುವವನಿಗೆ ಧನ್ಯವಾದವನ್ನು ಅರ್ಪಿಸಲಿ. ಸ್ವೀಕರಿಸುವವನು ಎದ್ದು ನಿಂತು ಅದಕ್ಕೆ ಅವಕಾಶವನ್ನು ಕೊಡಲಿ. ನಿಮ್ಮಿಂದ ಉಪಕಾರ ಪಡೆಯುವ ಜನರಿಗೆ ಕೃತಜ್ಞರಾಗಿ, ಅವರನ್ನು ದೇವರೆಂದು ಭಾವಿಸಿ."

ಸೇವೆಯನ್ನು ಸಾಧನೆಯಾಗಿಸಿಕೊಳ್ಳಲು ಧ್ಯಾನ, ಮೌನಗಳೂ ಅವಶ್ಯ. ಆಧ್ಯಾತ್ಮಿಕ ಪ್ರವೃತ್ತಿಯಿಲ್ಲದ ದಯೆ, ಅನುಕಂಪೆ ಹಾಗೂ ಸೇವೆಗಳೆಲ್ಲ ಸ್ವಾರ್ಥವನ್ನು ಸಾಧಿಸುವ ವಿಧಾನಗಳಾಗುತ್ತವೆ. ನೇರವಾಗಿ, ದಿಟ್ಟವಾಗಿ ನಮ್ಮ ಅಂತರಾಳವನ್ನು ಶೋಧಿಸಿಕೊಂಡು, ನಿಷ್ಕಲ್ಮಷವಾದ ಭಾವನೆಯಿಂದ, ಪ್ರೀತಿಯಿಂದ ಸೇವೆ ಸಲ್ಲಿಸುವ ಕ್ರಿಯಾತ್ಮಕ ದೃಷ್ಟಿ ಬೆಳೆಸಿಕೊಳ್ಳೋಣ.

## ಪ್ರಹಸನ ಪ್ರಸಂಗ

**ಆಸ್ಪತ್ರೆಯನ್ನು** ಪರಿಚಯಿಸುವ ಉದ್ದೇಶದಿಂದ ಶಾಲೆಯ ಸಣ್ಣ ಮಕ್ಕಳನ್ನು ಶಿಕ್ಷಕಿಯರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಮಕ್ಕಳು ಕುತೂಹಲದಿಂದ ಎಲ್ಲವನ್ನೂ ನೋಡುತ್ತಿದ್ದಂತೆ ಕ್ಷಕಿರಣಗಳ ತಜ್ಞರು ಬಾಲಕಿಯೊಬ್ಬಳನ್ನು ಮಾತನಾಡಿಸುತ್ತ ಕೇಳಿದರು, "ಮೂಳೆಯನ್ನು ಯಾವಾಗಲಾದರೂ ಮುರಿದಿದ್ದೆಯಾ?" ಬಾಲಕಿ ಹೌದೆಂದಳು. "ಬಹಳ ನೋವಾಯಿತಲ್ಲವೇ?" ಎಂದು ಆತ ಮರುಪ್ರಶ್ನೆ ಮಾಡಿದ. "ಇಲ್ಲಪ್ಪಾ" ಎಂದಳು ಬಾಲಕಿ. ಆಶ್ಚರ್ಯದಿಂದ "ಹೌದೆ, ಯಾವ ಮೂಳೆ ಮುರಿದದ್ದು?" ಎಂದ ತಜ್ಞ. "ನನ್ನ ತಂಗಿಯ ಕೈ" ಎನ್ನಬೇಕೇ ಆ ಬಾಲಕಿ!

* * *

**ಜೈಲಿನಲ್ಲಿರುವ** ಖೈದಿಗಳಿಗಾಗಿ ಶಿಕ್ಷಕರೊಬ್ಬರನ್ನು ನೇಮಿಸಲಾಗಿತ್ತು. ಮೂರು ದಿನಗಳಿಗೊಮ್ಮೆ ಅವರಿಗೆ ತರಗತಿಗಳು ಇರುತ್ತಿದ್ದವು. ಒಬ್ಬ ವ್ಯಕ್ತಿಯು ಹಲವಾರು ಕ್ಲಾಸ್‌ಗಳನ್ನು ತಪ್ಪಿಸಿಕೊಂಡು ಇರುತ್ತಿದ್ದ. ಶಿಕ್ಷಕ ವಿಚಾರಿಸಿದಾಗ ಅವನು ಒಮ್ಮೆ ಹಲ್ಲು ಕೀಳಿಸಿಕೊಂಡಿದ್ದ, ಮತ್ತೊಮ್ಮೆ ಟಾನ್ಸಲ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದ. ಕಡೆಯದಾಗಿ ಕೆಲಸದ ವೇಳೆಯಲ್ಲಿ ಬೆರಳು ಕೊಯ್ದುಕೊಂಡುಬಿಟ್ಟಿದ್ದ. ಈ ವಿವರಗಳನ್ನು ನೀಡಿದ ಪೇದೆ ಹೇಳಿದ, "ಸರ್, ಅವನ ಮೇಲೆ ಸ್ವಲ್ಪ ನಿಗಾ ಇಡಬೇಕು. ಅವನು ಒಂದೊಂದೇ ಅಂಗವನ್ನು ಹೊರಗಿಟ್ಟುಕೊಂಡು, ಇಲ್ಲಿಂದ ತಪ್ಪಿಸಿಕೊಳ್ಳುವ ಸನ್ನಾಹ ನಡೆಸುತ್ತಿರುವಂತಿದೆ!"

* * *

ಅಗ್ನಿಶಾಮಕದಳದವರಿಗೆ ಒಂದು ದೂರವಾಣಿ ಬಂದಿತು. "ನನ್ನ ಬೆಕ್ಕು ಮರದ ಮೇಲಿದೆ. ಅದನ್ನು ಕೆಳಗೆ ಇಳಿಸಬೇಕು. ನಾನು ಕಾಯುತ್ತಿರುವೆ" ಎಂದು ಹೆಂಗಸೊಬ್ಬಳು ತನ್ನ ವಿಳಾಸವನ್ನು ತಿಳಿಸಿದಳು. "ಬೆಕ್ಕುಗಳನ್ನು ರಕ್ಷಿಸುವುದು ನಮ್ಮ ಕೆಲಸವಲ್ಲ" ಎಂದು ಆತ ಉತ್ತರಿಸಿದಾಗ ಆಕೆ ಹೇಳಿದಳು, "ನನ್ನ ತಾಯಿಯೂ ಮರದ ಮೇಲೆ ಸಿಕ್ಕಿಹಾಕಿಕೊಂಡಿದ್ದಾಳೆ!"